ಮೈಸೂರ ಗೆಜೆಟ್.

ನಂ. 19 ಸರ್ಕಾರದಿಂದ ಪ್ರಾಯಿಪ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಮೇ ತಾ|| 13, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ.ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ನಂಬ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

	ಪುಟ
1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟಿನವರ ಇಸ್ತಿಹಾರ್ ನಾಮೆಗಳು.	71—74
2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್. ಆಫೀಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಖಾಲೆ ಡೈರೆಕ್ಟರು, ಫಾರೆಸ್ಟ್ ಕರ್ಜಸರ್‌ವೇಟರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿವಿಜ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫಿಸ್ ನೋಟಿಸ್‌ಗಳು. ..	223—232
3ನೇ ಭಾಗ—ಇಂಡ್ಯ ಗವರ್ಮೆಂಟಿನ ಮಂತ್ರಾಲೋಚನ ಸಭೆಯವರ ಆಕ್ಟ್‌ಗಳು.	
4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.—	
ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಜಹರೇ ಪಟ್ಟಿ.	55—65

1ನೇ ಭಾಗ.

ಅಫಿಷಿಯಲ್ ಮಿಸೊರಾಂಡಂ.

ತಾರೀಖು 8ನೇ ಮೇ 1876.

ತಮ್ಮ ಆಫಿಸ್ ಹೆಡ್ ಶಿರಸ್ತೇದಾರ್ ಮೆಸ್ಸರ್ ಬಿ. ಗೋಪಾಲೈಯನವರು, ಮಾಹೇ ಮಜಕೂರ್ 6ನೇ ಮುಕ್ತಂನಲ್ಲಿ ಹುಣಸೂರೊಳಗೆ ನಿರ್ಯಾಣವಾದರೆಂಬ ವ್ಯಸನಕರವಾದ ಸಮಾಚಾರವನ್ನು ಬಹಳ ದುಃಖಬೊಡನೆ ಅಫಿಷಿಯೇಟಿಂಗ್ ಚೀಫ್ ಕಮ್ಮಿಷನರವರು ಕೇಳಿದರು. ಮೆಸ್ಸರ್ ಗೋಪಾಲೈಯನವರು ಮದರಾಸ್ ಗವರ್ಮೆಂಟಿನಲ್ಲಿ ಪ್ರಸಿದ್ಧವಾದ ಉದ್ಯೋಗಗಳನ್ನು ಮಾಡಿ ನಂತರ 1867ನೇ ಇಸವಿಯಲ್ಲಿ ಮೈಸೂರು ಶೀಮೆಯ ಇನಾಂ ಕಮ್ಮಿಷನ್ನರ್ ಸಾಹೆಬರಿಗೆ ಸ್ಪೆಷಲ್ ಅಸಿಸ್ಟೆಂಟರಾಗಿ ಮೊಕರರಾದರು. ಸದರೀ ಉದ್ಯೋಗದಲ್ಲಿ ಶ್ಲಾಘ್ಯೆಗಳಾದ ಕೆಲಸಗಳನ್ನು ನಿರ್ವಹಿಸಿ, ಇಲಾಖಾ ಮೊಖ್ತೆಸರರ ನಂಬಿಕೆಯು, ಮತ್ತು ಗೌರವವು ಪಡದರು, ಸನ್ 1872ನೇ ಇಸವಿಯಲ್ಲಿ ಜವಾಬ್‌ದಾರಿಉಳ್ಳ ಹೆಡ್ ಶಿರಸ್ತೇ ಕೆಲಸಕ್ಕೆ ಭಡತಿ ಹೊಂದಿದರು, ಮತ್ತು ಕಳದ ನಾಲ್ಕು ಸಂವತ್ಸರಗಳಲ್ಲಿ ಖಂಡಿತವಾದ ಪ್ರಾಮಾಣಿಕತೆ ಹಿಂಜರಿಯದ ಮೆಹನತ್ ಯಿವುಗಳ ವಿಷಯದಲ್ಲಿ ಅವರ ಶ್ಲಾಘ್ಯವಾದ ನಡತೆಯನ್ನು ಜೆಂನಾಗಿ ಕಾಪಾಡಿಕೊಂಡಿದ್ದರು.

"ಬಮೋಜೀಬ್ ಹುಕುಂ,"

J. S. F. MACKENZIE,
Offg. Secretary.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜ ನ ರ ಲ್ .

ನಂ. 24. ತಾರೀಖು 28ನೇ ಏಪ್ರೆಲ್ 1876.

ಡಿಕ್ಲೆರೇಷ್ನ್.—(ಲ್ಯಾಂಡ್ ಅಕ್ವಿಜಿಷ್ನಯಾನೆ ಜಮ್ಮಿ ಸಂಪಾದನೇ ವಿಷಯದ ಆಕ್ಟ್ಯುಯೆಂಬ) 1870ನೇ ಇಸವಿ 10ನೇ ಆಕ್ಟಿನ 6ನೇ ನಿಕರ್ಷ ನಿಬಂಧನೆಗಳನುಸರಿಸಿ ಇದರಿಂದ ತಿಳಿಸಲ್ಪಡುವದೇನಂದರೆ,—ಈ ಕೆಳಗೆ ಕಂಡ ಪಟ್ಟೀಯಲ್ಲಿ ನಮೂದಿರುವ ಜಮ್ಮಿಗಳು ಮ ಈ ಟ್ಟಗಳು ಲಷ್ಕರ್ ಮೊಹಲ್ಲಾದೊಳಗೆ ಗೋಧೀ ಗಡಂಗು ಬೀದಿಯನ್ನು ಅಗಲ ಪಡಿಸುವ ಬಗ್ಗೆ ಮೈಸೂರು ಷಹರ್ ಮ್ಯೂನಿಸಿಪಲ್ ಯಿಲಾಖೆಯವರಿಗೆ ಬೇಕಾಗಿರುತ್ತೆ.

ನಂಬರ್	ಮೊಹಲ್ಲಾ	ಮೊಲೀಕರ ಹೆಸರು	ಜಮ್ಮಿ ವಿವರ	ಇರತಕ್ಕ ಸ್ಥಳ	ವಿಸ್ತೀರ್ಣ ಉ.	ಅ.	ಎ.	ಕಂದಾಯ.	ಸರಹದ್ದು.
1		ಇಮಾಮುದ್ದೀನ್ ಖಾನ್	ಮನೆಯಭಾಗ	ಗೋಧೀ ಗಡಂಗುಬೀದಿ	85	8	0	ಈ ಮನೆಗಳ ಭಾಗಗಳು ಬೇಕಾಗಿರುವದರಿಂದ ಇದರ ಕ್ರಯದ ಹೊಣಗೆ ಮತ್ತು ಸೊಬಲಗ ಕಮ್ಮಿಷನರರಾಯನ ಕಂದಾಯದ ಸೊಬಲಗ ಯೂಗಲಾರದು.	ಪೂರ್ವಕ್ಕೆ —ದೋಂಡೋಜಿಮನೇ ದಕ್ಷಿಣಕ್ಕೆ, ಪಶ್ಚಿಮಕ್ಕೆ, ಉತ್ತರಕ್ಕೆ } ಪಬ್ಲಿಕ್ ರಸ್ತೆಗಳು
2		ಪುಟ್ಟಮಲ್ಲಯ್ಯಾ	ಡಿಟೋ	ಡಿಟೋ	35	8	0		ಪೂರ್ವ ಮತ್ತು ದಕ್ಷಿಣಕ್ಕೆ —ಪಬ್ಲಿಕ್ ರಸ್ತೆಗಳು ಪಶ್ಚಿಮಕ್ಕೆ —ಸುಬ್ಬರಾಜೇ ಅರಸರಬಂಗ್ಲೆ. ಉತ್ತರಕ್ಕೆ —ನೂರುದ್ದೀನ ಮನೆ
3	ಲಷ್ಕರ್ ಮೊಹಲ್ಲಾ	ವೆಂಕಟಗಿರಿ ಗೋಸಾಯಿ	ಪಾಳುಜಮ್ಮಿ	ಡಿಟೋ	10	4	0		ದಕ್ಷಿಣಕ್ಕೆ —ಪಬ್ಲಿಕ್ ರಸ್ತೆ ಪಶ್ಚಿಮಕ್ಕೆ —ಡಿಟೋ ಗಲ್ಲಿ ಉತ್ತರಕ್ಕೆ —ವೆಂಕಟಶಾಸ್ತ್ರೀ ಮನೆ ಪೂರ್ವಕ್ಕೆ —ಮೊಲೀಕನ ಮನೆ
4		ತಿಮ್ಮಣ್ಣಾ	ಮನೆಯಭಾಗ	ಡಿಟೋ	24	3	0		ದಕ್ಷಿಣಕ್ಕೆ —ಪಬ್ಲಿಕ್ ರಸ್ತೆ ಪೂರ್ವಕ್ಕೆ —ಪುಟ್ಟಮ್ಮನ ಮನೆ ಪಶ್ಚಿಮಕ್ಕೆ —ವೆಂಕಟಗಿರಿ ಮನೆ ಉತ್ತರಕ್ಕೆ —ರಹಿಮ್ಮಾ ಖಾನನ ಮನೆ
5		ಬಿ. ಪುಟ್ಟಮ್ಮ	ಪೂರಾಮನೆ	ಡಿಟೋ	30	8	0	3 0 0	ಪೂರ್ವ ವ ದಕ್ಷಿಣಕ್ಕೆ —ಪಬ್ಲಿಕ್ ರಸ್ತೆ ಪಶ್ಚಿಮ ವ ಉತ್ತರಕ್ಕೆ ತಿಮ್ಮಮ್ಮನ ಮನೆ

ನಂ. 28. ತಾರೀಖು 1ನೇ ಮೇ 1876.

ಹೊನ್ನಾಳಿ ತಾಲ್ಲೂಕು ಅಮಲ್ದಾರ್ ವೇದಾಂತೈಯ್ಯಂಗಾರು, ಆವಶು ಉಪಯೋಗಿಸಿಕ್ಕೊಳ್ಳುವ ತಾರೀಖು ಲಾಗಾಯಿತ್ತು ಯರಡು ತಿಂಗಳು 9 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಗರ ತಾಲ್ಲೂಕು ಪೇಷ್ಕಾರ್ ಅಪ್ಪೂರಾಯರು, ವೇದಾಂತೈಯಂಗಾರ್ರು ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಹೊನ್ನಾಳಿ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 36. ತಾರೀಖು 9ನೇ ಮೇ 1876.

ಶಿವಮೊಗ್ಗಾ ಡಿಸ್ಟ್ರಿಕ್ಟು ಶಿಕಾರಿಪುರ ತಾಲ್ಲೂಕು ಅಮಲ್‌ದಾರ್ ತಿರುಮಲರಾಯರಿಗೆ ಸಿವಿಲ್ ಲೀವ್ ಕೋಡ್ ಸಪ್ಲಿಮೆಂಟ್ F. 7ನೇ ಸೆಕ್ಷನ್ ಅನುಸರಿಸಿ 6 ತಿಂಗಳ ಫರಲೊ ರಜಾ ಕೊಡಲ್ಪಟ್ಟಿರುತ್ತೆ.

ಶಿವಮೊಗ್ಗಾ ತಾಲ್ಲೂಕು ಪೇಷ್ಕಾರ್ ಮಂಜಪ್ಪನವರು ತಿರುಮಲರಾಯರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದುಹುಕ್ಕುಂ ಕೊಡುವ ಪರಿಯಂತ ಶಿಕಾರಿಪುರ ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 37. ತಾರೀಖು 9ನೇ ಮೇ 1876.

ಹರಿಹರದಲ್ಲಿ ಇಡಲ್ಪಟ್ಟಿರುವ ಪೇಷ್ಕಾರ್ ಲಾಜರಸ್ ಡುಮಿಂಗೋಯವರು ಮಾಜಿ ಹರಿಹರ ತಾಲ್ಲೂಕಿಗೆ ಸೇರಿದ ದರೋಬಸ್ತು ಹೋಬಳಿಗಳಲ್ಲಿ ಸ್ಥಳಾಧಿಕಾರನಿಸಿ 1872ನೇ ಇಸವಿ 10ನೇ ನಂಬರ್ ಆಕ್ಟಿನ 19ನೇ ಸೆಕ್ಷನ್ ಅರ್ಥರಿತ್ಯ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ನೊಕರರ್ ಮಾಡಲ್ಪಟ್ಟಿರುವದಲ್ಲದೆ ಅದೇ ಆಕ್ಟಿನ 23 (a) ಸೆಕ್ಷನ್ I ವ IIನೇ ಕ್ಲಾಜ್‌ಗಳಲ್ಲಿ ವಿವರಿಸಲ್ಪಟ್ಟ ಅಧಿಕಾರೆಗಳ ಪೈಕಿ ವಿಚಾರಣೆ ಬಗ್ಯೆ ಕಮಿಟ್ ಮಾಡತಕ್ಕ ಅಧಿಕಾರ ವಿನಾ ಮಿಕ್ಕ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ. 38. ತಾರೀಖು 9ನೇ ಮೇ 1876.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ನೆಲಗೊಂಡಿರುವ ಸಿವಿಲ್ ಕೋರ್ಟುಗಳಿಗೆ ಹಾಸನ ಡಿಸ್ಟ್ರಿಕ್ಟು ಕೆಲವು ಪ್ರದೇಶಗಳ ಮೇಲೆ ಅಧಿಕಾರವನ್ನುಂಟು ಮಾಡಿದ 1875ನೇ ಇಸವಿ ಏಪ್ರಿಲ್ 15ನೇ ಮಕ್ತುಂ ಚೀಫ್ ಕಮ್ಮಿಷನ್ನರ್‌ಯವರ ಇಸ್ತಿಹಾರ್ ತಿದ್ದುಪಡಿ ಮಾಡಿ ಸಕಲಜನಗಳ ತಿಳುವಳಿಕೆ ಬಗ್ಯೂ ನಡವಳಿಕೆ ಬಗ್ಯೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ನಾಗಮಂಗಲ ತಾಲ್ಲೂಕು ಮತ್ತು (ಕಿಕ್ಕೇರಿ ಹೋಬಳಿ ಶಿವಾಯಿ) ಅತ್ತಿಕುಪ್ಪ ತಾಲ್ಲೂಕು ಯಿವುಗಳ ಮೇಲೆ ಮೈಸೂರು ಡಿಸ್ಟ್ರಿಕ್ಟು ಡಿಪ್ಯುಟಿ ಕಮ್ಮಿಷನರ್ ವ ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟುಗಳಿಗೆ ವುಂಟು ಮಾಡಲ್ಪಟ್ಟಿದ್ದ ಅರಿಜನಲ್ ವ ಅಪ್ಪೀಲ್ ಸಿವಿಲ್ ಅಧಿಕಾರವು ಯಿದರ ದೆಶೇಯಿಂದ ಹಿಂತಿರಿಗಿಸಿ ಕೊಳ್ಳಲ್ಪಟ್ಟು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನ್ನರ್ ವ ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟುಗಳಿಗೆ ಮರಳಿ ವರ್ಗಿಸಲ್ಪಟ್ಟಿರುತ್ತೆ.

ಮುಂಚ್ಯದ ಮುನಸಫರ ಅರಿಜನಲ್ ಅಧಿಕಾರಕ್ಕೆ ಸದರೀ ಯೇರ್ಪಾಡಿನಿಂದ ಬಾಧಕ ವುಂಟಾಗಿರುವದಿಲ್ಲ ಆದರೆ ಜುಡಿಷಿಯಲ್ ಅಸಿಸ್ಟೆಂಟ್ ಮತ್ತು ಡಿಪ್ಯುಟಿ ಕಮ್ಮಿಷನ್ನರ್ ಕೋರ್ಟುಗಳಿಂದ ದರಿಯಾಫ್ತ್ ಮಾಡಲ್ಪಡತಕ್ಕ ಮತ್ತು ಮೇಲೆ ಹೇಳಲ್ಪಟ್ಟ ನಾಗಮಂಗಲ, ಅತ್ತಿಕುಪ್ಪ ತಾಲ್ಲೂಕುಗಳಲ್ಲಿ ಹುಟ್ಟುವ ದಾವೆಗಳು ಹಾಸನದಲ್ಲಿರುವ ಐರ್ಜ್ ಕೋರ್ಟುಗಳಲ್ಲಿ ದಾಖಲ್ಮಾಡಲ್ಪಡತಕ್ಕದ್ದು, ಸದರೀ ತಾಲ್ಲೂಕುಗಳಲ್ಲಿ ಹುಟ್ಟುವ ದಾವೆಗಳಿಗೆ ಮುಂಚ್ಯದ ಮುನಸೀಫರು ಕೊಡುವ ಫೈಸಲುಗಳ ಮೇಲೆ ಮಾಡಲ್ಪಡುವ ಅಪ್ಪೀಲ್‌ಗಳು ಹಾಸನ ಡಿಪ್ಯುಟಿ ಕಮ್ಮಿಷನ್ನರ್ ಕೋರ್ಟಿನಲ್ಲಿ ದಾಖಲ್ಮಾಡಲ್ಪಟ್ಟು ಅವು ಫೈಸಲ್ ಬಗ್ಯೆ ಹಾಸನ ಜುಡಿಶಯಲ್ ಅಸಿಸ್ಟೆಂಟರಿಗೆ ವರ್ಗಮಾಡಲ್ಪಡಬಹುದು.

ಈ ಇಸ್ತಿಹಾರ್‌ನಿಂದ ನಿಯಮಿಸಲ್ಪಡುವ ಅಧಿಕಾರ ಬದಲಾವಣೆಯು, ಸ್ಯ 1876ನೇ ಇಸವಿ ಜೂ ಗುರ್ಯೇ ಲಾಗಾಯತು ಜಾರೀಯಲ್ಲಿ ಬರತಕ್ಕದ್ದಿದೆ.

ನಂ. 39. ತಾರೀಖು 9ನೇ ಮೇ 1876.

ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನ್ನರ್ ಮೆಸ್ಸರ್ ಮಾದೈಯನವರಿಗೆ 2ನೇ ಕ್ಲಾಸ್ ಮೇಜಸ್ಟ್ರೇಟ್ ಅಧಿಕಾರಗಳೂ, ಮತ್ತು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ 24ನೇ ಸೆಕ್ಷನ್ನಲ್ಲಿ ನಮೂದಿಸಲ್ಪಟ್ಟ ಅಧಿಕಾರಗಳಿಗೆ ಜಾಸ್ತೀಯಾಗಿ ಅದೇ ಕೋಡ್ 25 (a) ಸೆಕ್ಷನ್ I ವ IIನೇ ಕ್ಲಾಜ್‌ಗಳನುಸರಿಸಿ ಲಾಷ್ ದರಿಯಾಫ್ತ್ ಮಾಡತಕ್ಕ ಮತ್ತು ಫಿರ್ಯಾದು ವಗ್ಯೆರೇಗಳನ್ನು ದಾಖಲ್ಮಾಡಿಕೊಳ್ಳತಕ್ಕ ಅಧಿಕಾರಗಳೂ ಕೊಡಲ್ಪಟ್ಟಿವೆ.

ನಂ. 40. ತಾರೀಖು 10ನೇ ಮೇ 1876.

ತುಮುಕೂರು ಡಿಸ್ಟ್ರಿಕ್ಟು ಆಕ್ಟಿಂಗ್ ಡೆಪ್ಯುಟಿ ಕಮ್ಮಿಷನ್ನರ್ ಕೆಪ್ಟ್ ಲಫ್ಟ್ನಂ ಸಾಹೆಬರಿಗೆ ಸ್ಯ 1872ನೇ ಇಸವಿ, 10ನೇ ನಂಬರ್ ಆಕ್ಟಿನ 35ನೇ ಸೆಕ್ಷನ್ ಅನುಸರಿಸಿ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್ ಅಧಿಕಾರಗಳೂ ಮತ್ತು ಅದೇ ಆಕ್ಟಿನ 36ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ಜಾಸ್ತೀ ಅಧಿಕಾರಗಳೂ, ಸದರೀ ಸಾಹೆಬರು ಆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನ್ನರ್ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವ ಕಾಲದೊಳಗೆ ಚಲಾಯಿಸತಕ್ಕ ಬಗ್ಯೆ ಕೊಡಲ್ಪಟ್ಟಿವೆ.

ನಂ. 41. ತಾರೀಖು 10ನೇ ಮೇ 1876.

ಚಿತ್ರದುರ್ಗ ಡಿಸ್ಟ್ರಿಕ್ಟು ಚಳ್ಳಕೆರೆ ಸಬ್ ಡಿವೀಜ್ಯ ಮುನಸೀಫ್ ಮಲ್ಲಾರಿ ರಾಯರು, ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟರುತ್ತಾರೆ.

ನಂ. 42. ತಾರೀಖು 11ನೇ ಮೇ 1876.

ಇದರಿಂದ ಪ್ರಸಿದ್ಧಪಡಿಸುವದೇನಂದರೆ,—ಚಿತ್ರದುರ್ಗ ಡಿಸ್ಟ್ರಿಕ್ಟು ಚಳ್ಳಕೆರೆ ಮುನಸೀಫ್ ಕೋರ್ಟು, ಮುನಸೀಫರು ರಜಾದ ಮೇಲೆ ಯಿರುವ ಕಾಲದೊಳಗೆ, ನೊಂದು ತಿಂಗಳ ವರವಿಗೂ ಮುಚ್ಚಲ್ಪಡುತ್ತೆ.

2. ಮುಚ್ಚಲ್ಪಟ್ಟ ಕಾಲದಲ್ಲಿ ಕೋರ್ಟು ಹೆಚ್ ಮುನಷಿಯು ಸೋಮವಾರ, ಬೃಹಸ್ಪತಿವಾರ ಆಫಿಸಿಗೆ ಬರುವರು ಯಾವ ಬಗ್ಯೆ ಅಂದರೆ,—

(a.) ದಾವಾ ಅರ್ಜಿಗಳನ್ನು ಅರ್ಜೀಗಳನ್ನು ಅಮಲ್‌ಜಾರಿ ವಗೈರೆಬಗ್ಯೆ ಅರ್ಜಿಗಳನ್ನು ತೆಗದುಕ್ಕೊಳ್ಳತಕ್ಕ ಬಗ್ಯೂ,

(b.) ಸಮ್ಮನ್ಸುಗಳ ವ ಯಿತರ ಪ್ರೊಸೆಸ್‌ಗಳ ಸಾದರಾತೀಬಗ್ಯೆ, ಮತ್ತು ರಿಕಾರ್ಡುಗಳ ರವಾನೆ ಬಗ್ಯೆ ಇತರ ಕೋರ್ಟುಗಳಿಂದ ಬರುವ ಹುಕ್ಕುಂಗಳಿಗೆ ನಿಗೇ ಕೊಡತಕ್ಕ ಬಗ್ಯೂ,

(c.) ಕಕ್ಷಿಗಾರುಗಳಿಂದ ಖಾಯಿಷ್ ಮಾಡಲ್ಪಡುವ ಜಡ್ಜಮೆಂಟ್‌ಗಳ, ಡಿಕ್ರಿಗಳ, ಆರರ್‌ಗಳ ಷರಾ ಸೈನಾದ ನಕ್ಕಲ್‌ಗಳನ್ನು ಅವರುಗಳಿಗೆ ಕೊಡತಕ್ಕ ಬಗ್ಯೂ.

ನಂ. 43. ತಾರೀಖು 11ನೇ ಮೇ 1876.

ಅಸಿಸ್ಟೆಂಟ್ ಕಮಿಷನ್ನರ್ ಮೆಸ್ಟರ್ ವುಡ್‌ಕಾಕ್ ಸಾಹೆಬರು 1876ನೇ ಇಸವಿ ಮಾರ್ಚಿ 30ರ ಲಾಗಾಯಿತು ಏಪ್ರೆಲ್ 3ರ ವರಿಗೆ ತುಮುಕೂರು ಡಿಸ್ಟ್ರಿಕ್ಟು ಚಾರ್ಜನ್ನು ವಹಿಸಿದ್ದರು.

ನಂ. 44. ತಾರೀಖು 11ನೇ ಮೇ 1876.

ಗುಡಿಬಂಡೆ ತಾಲ್ಲೂಕು ಅಮಲ್‌ದಾರ್ ಖಾಜಾಮೊಹದ್ದೀರಿಗೆ 1876ನೇ ಇಸವಿ ಏಪ್ರೆಲ್ 18ರ ಲಾಗಾಯಿತು ಯರಡು ತಿಂಗಳು ಇಪ್ಪತ್ತು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟರುತ್ತೆ.

ದೇವನಹಳ್ಳಿ ಮಾಜಿ ಅಮಲ್‌ದಾರ್ ತಮ್ಮೈಯನವರು ಐರ್ಜ ಖಾಜಾ ಮೊಹದ್ದೀರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ವರಿಯಂತ ಗುಡಿಬಂಡೆ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುವಂತೆ ಮೊಕರರ್.

"ಬಮೋಜೀಬ್ ಹುಕ್ಕುಂ,"

J. S. F. MACKENZIE,
Offg. Secretary.